ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು
ನೂರ ನಲವತ್ತನೆಯ ಅಧಿವೇಶನ
ಶುಕ್ರವಾರ, ದಿನಾಂಕ : 20 ನೇ ಮಾರ್ಚ್, 2020

ಪ್ರವಾಸಿ ತಾಣಗಳ ಸೌಕರ್ಯ ಮತ್ತು ಅವುಗಳ ಅಭಿವೃದ್ಧಿಯ ಕುರಿತು

ಶ್ರೀ ಟಿ. ಎ. ಶರವಣ(ವಿಧಾನಸಭೆಯಿಂದ ಚುನಾಯಿತರಾದವರು):-

1374 (1648) ಮಾನ್ಯ ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದಲ್ಲಿ ಎಷ್ಟು ಪ್ರವಾಸಿ ತಾಣಗಳಿವೆ ಮತ್ತು ಅವುಗಳಲ್ಲಿ ನೈಸರ್ಗಿಕವಾಗಿ ರೂಪುಗೊಂಡಂತಹ ಪ್ರವಾಸಿ ತಾಣಗಳ ಸಂಖ್ಯೆ ಎಷ್ಟು ;

(ಆ) ಈ ಎಲ್ಲಾ ಪ್ರವಾಸಿ ತಾಣಗಳು ಪ್ರವಾಸಿಗರಿಗೆ ಅನುಕೂಲತೆಗಳ ದೃಷ್ಟಿಯಿಂದ ಮೂಲಭೂತ ಸೌಕರ್ಯಗಳನ್ನು ಹೊಂದಿವೆಯೆ; ಹಾಗಿದ್ದಲ್ಲಿ, ಪ್ರಸ್ತುತ ರಾಜ್ಯವು ಪ್ರವಾಸೋದ್ಯಮ ಕ್ಷೇತ್ರದಲ್ಲಿ ದೇಶದಲ್ಲಿ ಎಷ್ಟನೇ ಸ್ಥಾನದಲ್ಲಿದೆ ;

(ಇ) ಪ್ರವಾಸಿ ಚುಟುವಟಿಕೆಗಳಿಂದ ಪರೋಕ್ಷವಾಗಿ ಈ ಕ್ಷೇತ್ರದಲ್ಲಿ ಇಂದಿನ ಉದ್ಯೋಗ ಸೃಷ್ಟಿಯ ಶೇಕಡ ಪ್ರಮಾಣ ಎಷ್ಟು ;

(ಈ) ರಾಜ್ಯದ ಜಿಡಿಪಿಗೆ ಪ್ರವಾಸೋದ್ಯಮ ಇಲಾಖೆಯು ನೀಡುತ್ತಿರುವ ಕೊಡುಗೆ ಎಷ್ಟು ; ಇದನ್ನು ಉತ್ತಮಗೊಳಿಸಲು ಸರ್ಕಾರವು ತೆಗೆದುಕೊಂಡ ಕ್ರಮಗಳಾವುವು ;

(ಉ) ಪ್ರವಾಸಿಗರ ಸಂಖ್ಯೆ ಅಧಿಕವಾಗಲು ಮತ್ತು ಇದನ್ನು ಒಂದು ಉದ್ಯಮವನ್ನಾಗಿ ಬೆಳೆಸಲು ಇಲಾಖೆಯ ಮುಂದಿರುವ ಸವಾಲುಗಳೇನು ; ಇದಕ್ಕೆ ಪ್ರವಾಸೋದ್ಯಮ ನೀತಿಯಲ್ಲಿ ಕಂಡುಕೊಳ್ಳಲಾದ ಮಾರ್ಗೋಪಾಯಗಳಾವುವು ?